ವಸತಿ ಶಿಕ್ಷಣ ಬೋಧಕರ ಸಿಬ್ಬಂದಿ

2663 (2290); ಶ್ರೀ ಡಾ॥ ರಫೀಕ ಅಹ್ಮದ್ .ಎಸ್ (ತುಮಕೂರು ನಗರ)

ಅ) ರಾಜ್ಯದಲ್ಲಿ ವಸತಿ ಶಿಕ್ಷಣ ಸಂಸ್ಥೆಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆಗಳು ಎಷ್ಟು (ಜಿಲ್ಲಾವಾರು ವಿವರ ಒದಗಿಸುವುದು);

ಆ) ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯ ಸಂಖ್ಯೆ ಎಷ್ಟು (ವಿವರ ನೀಡುವುದು);

ಇ) ರಾಜ್ಯದಲ್ಲಿ ಸ್ವಂತ ಕಟ್ಟಡ ಹೊಂದಿರುವ ಶಾಲೆಗಳು ಹಾಗೂ ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವ ಶಾಲೆಗಳೆಷ್ಟು (ವಿವರ ನೀಡುವುದು)

ಈ) ಸದರಿ ಶಾಲೆಗಳಿಗೆ ಸರ್ಕಾರದ ಒದಗಿಸಿರುವ ಮೂಲ ಸೌಕರ್ಯಗಳಾವುವು ಹಾಗೂ ಕಳೆದ ಸಾಲಿನಲ್ಲಿ ಒದಗಿಸಿರುವ ಅನುದಾನವೆಷ್ಟು (ವಿವರ ನೀಡುವುದು);

ಉ) ಪ್ರತಿ ವಿದ್ಯಾರ್ಥಿಗೆ ಸರ್ಕಾರ ನೀಡುವ ಅನುದಾನವೆಷ್ಟು? (ವಿವರ ನೀಡುವುದು)

ಶ್ರೀ ಹೆಚ್. ಆಂಜನೇಯ (ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ಸಚಿವರು)

ಅ) ರಾಜ್ಯದಲ್ಲಿ ಒಟ್ಟು 525 ವಸತಿ ಶಾಲೆಗಳು ಮತ್ತು 29 ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ. ಜಿಲ್ಲಾವಾರು ವಸತಿ ಶಾಲೆ/ ಕಾಲೇಜುಗಳ ಸಂಖ್ಯೆಗಳ ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

ಆ) ಪ್ರಸ್ತುತ ಈ ವಸತಿ ಶಾಲೆಗಳಲ್ಲಿ ಈ ಕೆಳಕಂಡ ಖಾಯಂ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ.

1) ಪ್ರಾಂಶುಪಾಲರು – 284

2) ಶಿಕ್ಷಕರು – 2893

3) ಬೋಧಕೇತರ ಸಿಬ್ಬಂದಿಗಳು(ಪ್ರ.ದಸ, ನಿ.ಪಾಲಕರು, ಶೂಶ್ರೂಷಕರು)

ಇ)

1. 303 ವಸತಿ ಶಾಲೆಗಳು ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿವೆ.
2. 203 ವಸತಿ ಶಾಲೆಗಳು ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿವೆ.
3. 48 ವಸತಿ ಶಾಲೆಗಳು ಬಾಡಿಗೆ ರಹಿತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿವೆ.

ಈ) ಬೇಡಿಕೆ ಇರುವ ವಸತಿ ಶಾಲೆಗಳಿಗೆ ಈ ಕೆಳಕಂಡ ಸಾಲುಗಳಲ್ಲಿ ಅವುಗಳ ಮುಂದೆ ತೋರಿಸಲಾದ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ.

1) ಜಮಖಾನೆ, ಬೆಡ್ ಶೀಟ್, ಬೆಡ್‌ಸ್ಪ್ರೆಡ್‌ಗಳು,

2) ಹಾಸಿಗೆ, ದಿಂಬುಗಳು,

3) ವಾಟರ್ ಪ್ಯೂರಿ ಪೈಯರ್,

4) ಗ್ಯಾಸ್ ಲೈನ್ ಪೈಪ್ ಅಳವಡಿಕೆ, ಹೆಚ್ಚುವರಿ ಸಿಲಿಂಡರ್‌ಗಳಿಗಾಗಿ ಠೇವಣಿ

5) ಬೆಂಚು, ಡೆಸ್ಕುಗಳು

ವಸತಿ ಶಾಲೆಗಳ ಬೇಡಿಕೆ ಮತ್ತು ಅನುದಾನದ ಲಭ್ಯತೆಗೆ ಅನುಗುಣವಾಗಿ ಹಂತಹಂತವಾಗಿ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುವುದು.

ಆ) 2013–14 ನೇ ಸಾಲಿನಲ್ಲಿ ಈ ವಸತಿ ಶಾಲೆಗಳ ನಿರ್ವಹಣೆಗಾಗಿ ₹ 411.91 ಕೋಟಿಗಳನ್ನು ಒದಗಿಸಲಾಗಿದೆ.

ಉ) ಸರ್ಕಾರವು ಪ್ರತಿ ಮಾಹೆ ಪ್ರತಿ ವಿದ್ಯಾರ್ಥಿಗೆ ಆಹಾರ ಮತ್ತು ಇತರೆ ವೆಚ್ಚಗಳಿಗಾಗಿ ಈ ಕೆಳಕಂಡ ದರಗಳನ್ನು ನಿಗದಿಪಡಿಸಿದ್ದು, ಅದರಂತೆ ಪೂರೈಕೆ ಮಾಡಲಾಗುತ್ತಿದೆ.

1) ಆಹಾರ ವೆಚ್ಚ ಪ್ರತಿ ಮಾಹೆ ಪ್ರತಿ ವಿದ್ಯಾರ್ಥಿಗೆ – ₹ 1100/–
2) ಇತರೆ ವೆಚ್ಚ ಪ್ರತಿ ಮಾಹೆ ಪ್ರತಿ ವಿದ್ಯಾರ್ಥಿಗೆ (ಟೂತ್ ಪೇಸ್ಟ್, ಸೋಪು, ಬ್ರಷ್, ಎಣ್ಣೆ, ಇತ್ಯಾದಿ.) ₹ 100/–
3) ಸಮವಸ್ತ್ರ, ಶೂ, ಸಾಕ್ಸ್,(ಪ್ರತಿ ವಿದ್ಯಾರ್ಥಿಗೆ ಪ್ರತಿ ವರ್ಷ 2 ಜೊತೆ.) ₹ 800/–
4) ಲೇಖನ ಸಾಮಗ್ರಿಗಳು (ಪ್ರತಿ ವಿದ್ಯಾರ್ಥಿಗೆ ಪ್ರತಿ ವರ್ಷ) ₹ 500/–
5) ಎಸ್.ಎಸ್.ಎಲ್.ಸಿ. ಪರೀಕ್ಷಾ ಶುಲ್ಕ (ವಾರ್ಷಿಕ ಪ್ರತಿ ವಿದ್ಯಾರ್ಥಿಗೆ) ₹ 345/–
6) ದ್ವಿತೀಯ ಪಿ.ಯು.ಸಿ. ಅಂತಿಮ ವಾರ್ಷಿಕ ಪರೀಕ್ಷಾ ಶುಲ್ಕ (ಪ್ರತಿ ವಿದ್ಯಾರ್ಥಿಗಳಿಗೆ) ₹ 282/–
7) ಹಾಸಿಗೆ, ಹೊದಿಕೆ (ನೂತನ ವಿದ್ಯಾರ್ಥಿಗೆ) ಮಂಚ, ಟ್ರಂಕ್ ₹ 3600/–

ವಿಧಾನಸಭಾ ಸದಸ್ಯರಾದ ಡಾ ರಫೀಕ ಅಹಮದ ಎಸ್ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ.2290 ಕ್ಕೆ ಅನುಬಂಧ

ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ/ ಏಕಲವ್ಯ ಮಾದರಿ ವಸತಿ/ಪದವಿ ಪೂರ್ವ ವಸತಿ ಶಾಲಾ/ ಕಾಲೇಜುಗಳ ಕಾಮಗಾರಿಗಳಿಗೆ ಜಿಲ್ಲಾವಾರು ಪ್ರೋಷ್ಟರೆ:

ಕ್ರ ಸಂ	ಜಿಲ್ಲೆಯ ಹೆಸರು	ಪ್ರತಿ ಜಿಲ್ಲೆಯಲ್ಲಿರುವ ಒಟ್ಟು ವಸತಿ ಶಾಲೆಗಳ ಸಂಖ್ಯೆ
1	2	3
1	ಬೆಂಗಳೂರು (ನ)	5
2	ಬೆಂಗಳೂರು (ಗ್ರಾ)	6
3	ರಾಮನಗರ	20
4	ಶಿವಮೊಗ್ಗ	18
5	ಚಿತ್ರದುರ್ಗ	20
6	ಕೋಲಾರ	16
7	ಚಿಕ್ಕಬಳ್ಳಾಪುರ	14
8	ತುಮಕೂರು	28
9	ದಾವಣಗೆರೆ	19
10	ಮೈಸೂರು	24
11	ಮಂಡ್ಯ	25
12	ಚಿಕ್ಕಮಗಳೂರು	21
13	ಚಾಮರಾಜನಗರ	14
14	ದಕ್ಷಿಣ ಕನ್ನಡ	11
15	ಹಾಸನ	29
16	ಕೊಡಗು	8
17	ಉಡುಪಿ	6
18	ಬೆಳಗಾಂ	36
19	ಬಾಗಲಕೋಟೆ	19
20	ವಿಜಾಪುರ	18
21	ಧಾರವಾಡ	11
22	ಉತ್ತರ ಕನ್ನಡ	13
23	ಗದಗ	13
24	ಹಾವೇರಿ	19
25	ಗುಲ್ಬರ್ಗಾ (1 ಅ ಸಂ. ಮೊದೇಶಾ ಹೊಸ)	30
26	ಬೀದರ್	19
27	ಬಳ್ಳಾರಿ (1 ಹೊಸ ವಸತಿ ಶಾಲೆ, ಹಿಂ ವರ್ಗ ಕಿ ಇ ಇರಾಬೆಯಿಂದ)	30
28	ಯಾದಗಿರ	14
29	ರಾಯಚೂರು	26
30	ಕೊಪ್ಪಳ (1 ಅ ಸಂ. ಮೊದೇಶಾ ಹೊಸ)	22
	ಒಟ್ಟು ಕಾಮಗಾರಿಗಳ ವಿವರಗಳು	554